ಚಿತ್ರದುರ್ಗದ ಮುರುಘರಾಜೇಂದ್ರ ಮಠದವರು ಸರ್ಪಭೂಷಣ ಮಠಕ್ಕೆ ಉತ್ತರಾಧಿಕಾರಿಯ ಹೆಸರನ್ನು ಸೂಚಿಸಲು ಹಕ್ಕಿದೆಯೆಂದು ವಾದಿಸಿದರೆ ಸರ್ಪಭೂಷಣ ಮಠದವರು ಅವರಿಗೆ ಯಾವುದೇ ಹಕ್ಕಿಲ್ಲವೆಂದು ಹೇಳುತ್ತಿದ್ದಾರೆ. ಇದೇ ವ್ಯಾಜ್ಯದ ಮುಖ್ಯ ಅಂಶ. ಈ ವಿಷಯ ಮೇಲ್ಮಾಣಿಸಿದಂತೆ ಈಗ ಸಿವಿಲ್ ಕೋರ್ಟಿನ ಮುಂದೆ ಇದೆ.

ಸರ್ಕಾರ ಇದರ ಬಗ್ಗೆ ವಿಚಾರಣೆ ನಡೆಸಿ, ಸೂಕ್ತ ಕ್ರಮ ತೆಗೆದುಕೊಳ್ಳುವುದು.

ಶ್ರೀ ಕೆ.ಹೆಚ್. ಪಾಟೀಲ್.—ಇಲ್ಲಿನ ಸ್ವಾಮಿಗಳಿಗೆ ಯಾವುದೇ ಹಕ್ಕಿದ್ದರೂ ಸಹಾ ಸುಮಾರು ಹತ್ತು ಕೋಟಿ ರೂಪಾಯಿ ಬೆಲೆ ಬಾಳುವಂಥ ಸಾರ್ವಜನಿಕ ಆಸ್ತಿ ಇದೆ. ಅವರಿವರ ತಂಟೆಯಿಂದ ಅಂಥ ಜನರ ಕೈ ಸೇರಬಾರದು. ಸರ್ಕಾರ ಟ್ರಸ್ಟ್ ಇರುವುದರಿಂದ ನೀವು ಇದರ ಬಗ್ಗೆ ಗಮನ ಕೊಡಬೇಕು. ಕೋರ್ಟಿನಲ್ಲಿ ಯಾವ ಸ್ವಾಮಿಗಳಿಗೆ ಸೇರುತ್ತದೆ ಎಂದು ನೋಡುವುದು ಬೇರೆ ವಿಚಾರ. ಇಬ್ಬರೂ ಸ್ವಾಮಿಗಳಿಗೂ ಅನೇಕ ಜನ ಭಕ್ತರು ಇದ್ದಾರೆ. ಭಕ್ತರಿಗೆ ಸೂಕ್ತವಾಗುವ ರೀತಿಯಲ್ಲಿ ಸ್ವಾಮಿಗಳ ಹಿತವನ್ನು ರಕ್ಷಣ ಮಾಡುವಂತೆ ವಿಲೇವಾಟಿ ಮಾಡದಂತೆ ಸರ್ಕಾರದವರು ಸೂಕ್ತವಾದಂಥ ಕ್ರಮವನ್ನು ತೆಗೆದುಕೊಳ್ಳುತ್ತೀರಾ ? ಎರಡನೆಯದು ಆಸ್ತಿಯ ಬಗ್ಗೆ ಮಠದಲ್ಲಿ ಯಾರಿಗೆ ಹಕ್ಕು ಇದೆ?

ಶ್ರೀ ಎಸ್. ಆರ್. ಬೊಮ್ಮಾಯಿ — ಸ್ವಾಮಿ ಈ ವಿಚಾರದಲ್ಲಿ ಕಾನೂನು ರೀತ್ಯಾ ಸರ್ಕಾರಕ್ಕೆ ಏನು ಅಧಿಕಾರ ಇದೆ ಎನ್ನುವ ಬಗ್ಗೆ ವಿಚಾರ ಮಾಡಿ ಕ್ರಮ ತೆಗೆದುಕೊಳ್ಳುತ್ತೇವೆ. ಸಿವಿಲ್ ಲಿಟಿಗೇಷನ್ ಹಿಂದೆ ನಡೆದಿದೆ ಇವತ್ತು ನಡೆಯುತ್ತಿದೆ. ಮಾನ್ಯ ಪಾಟೀಲರು ಕೇಳುವಂಥ ವಿಲೇವಾಟಿ ಆಗದಂತೆ ಸರ್ಕಾರ ಮಾಡುತ್ತದೆ. ಮಠದ ಕಬ್ಜಾದ ಬಗ್ಗೆ ವಿವಾದ ಇದೆ. ಈ ಪರದಿಯಲ್ಲಿ ತಿಳಿದ ಪ್ರಕಾರ ಮುರುಘರಾಜೇಂದ್ರ ಮಠದ ಸ್ವಾಮಿಗಳ ಭಕ್ತರು ಆ ಮಠದಲ್ಲಿದ್ದಾರೆ. ಆ ಕಡೆಯವರೂ ನಮ್ಮವರು ಎಂದು ವಾದ ಮಾಡುತ್ತಿದ್ದಾರೆ. ಈ ಹಂತದಲ್ಲಿದೆ.

ಅಧ್ಯಕ್ಷರು.—ಡಿ.ಟಿ. ಜಯಕುಮಾರ್‌ರವರೇ ತಮ್ಮ ಸೂಚನೆಯನ್ನು ಮುಂದೂಡಲಾಗಿದೆ.

ನಿಯಮ 334ರ ಮೇರೆಗೆ

(1) ಸುಪ್ರೀಂ ಕೋರ್ಟಿನ ಜಡ್ಜ್‌ಮೆಂಟ್ ವಿರುದ್ಧ ಸರ್ಕಾರಿ ನೌಕರರ ಮುಷ್ಕರ

ಶ್ರೀ ಆರ್. ವೆಂಕಟರಾಮಯ್ಯ.—ಅಧ್ಯಕ್ಷರೇ, ಕರ್ನಾಟಕಾದ್ಯಂತ ಸರ್ಕಾರಿ ನೌಕರರು ರಾಜ್ಯಾಂಗದ ವಿಧಿ ೩೧೧ ಬಗ್ಗೆ ಸರ್ವೋಚ್ಚ ನ್ಯಾಯಾಲಯವು ಕೊಟ್ಟಿರುವ ತೀರ್ಮಾನದ ಬಗ್ಗೆ ಮುಷ್ಕರ ಹೂಡಿದ್ದರು. ಭಾರತಾದ್ಯಂತ ಕೂಡ ಮುಷ್ಕರ ಹೂಡಿದ್ದರು. ಈ ಬಗ್ಗೆ ಭಾರತದಲ್ಲಿ ರಾಷ್ಟ್ರೀಯ ರಾಜಕೀಯ ಪಾರ್ಟಿಗಳಾದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ, ಜನತಾ ಪಾರ್ಟಿ, ಭಾರತ ಕಮ್ಯುನಿಸ್ಟ್ ಪಾರ್ಟಿ ಮತ್ತಿತರ ಪಾರ್ಟಿಗಳು ಸರ್ವೋಚ್ಚ ನ್ಯಾಯಾಲಯವು ಸರ್ಕಾರಿ ಮತ್ತು ಅರೆ-ಸರ್ಕಾರಿ, ಸರ್ಕಾರಿ ಉದ್ಯಮಗಳಲ್ಲಿ ಈ ತೀರ್ಮಾನದಿಂದಾಗುವ ಅನ್ಯಾಯವನ್ನು ಪ್ರತಿಭಟಿಸಿ, ರಾಜ್ಯಾಂಗ ತಿದ್ದುಪಡಿ ಕೋರಿದ್ದಾರೆ. ಪಶ್ಚಿಮ ಬಂಗಾಳ ಸರ್ಕಾರ ಈ ತೀರ್ಮಾನವಿದ್ದರೂ ಸರ್ಕಾರಿ ಅಧಿಕಾರಿಗಳಿಗೆ ಇದರಿಂದ ಅನ್ಯಾಯವಾಗುವುದಿಲ್ಲವೆಂದು ಆಶ್ವಾಸನೆ ಕೊಟ್ಟಿದ್ದಾರೆ. ಅದೇ ರೀತಿ ಕರ್ನಾಟಕ ಸರ್ಕಾರ ಕೂಡ ಒಂದು ತೀರ್ಮಾನ ತೆಗೆದುಕೊಳ್ಳುವುದು ಸರ್ಕಾರಿ ನೌಕರರಿಗೆ ಆಗಿರುವ, ಆಗಬಹುದಾದ ಅನ್ಯಾಯದ ಬಗ್ಗೆ ಕರ್ನಾಟಕ ಸರ್ಕಾರ ತನ್ನ ನ್ಯಾಯವಾದ ನಿಲುವನ್ನು ಪ್ರಕಟಿಸಲು ಸರ್ಕಾರ ಸದನದಲ್ಲಿ ಹೇಳಿಕೆ ಕೊಟ್ಟು ನ್ಯಾಯ ದೊರಕಿಸಿಕೊಡಲು ಈ ಸಮಸ್ಯೆ ಬಗ್ಗೆ ಸದನದ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಮುಖ್ಯಮಂತ್ರಿಗಳು ಈ ವಿಚಾರವಾಗಿ ಪ್ರಧಾನಮಂತ್ರಿಗೆ ಸೂಚನೆ ಕೊಟ್ಟಿದ್ದಾರೆ. ಎಲ್ಲಾ ಮುಖ್ಯಮಂತ್ರಿಗಳ ಸಭೆ ಕರೆದು ಅದರ ಆಲೋಚನೆ ಮಾಡಬೇಕಾಗಿದೆ. ಇದು ಅಖಿಲ ಭಾರತ ಪಟ್ಟದ್ದಾಗಿರುವುದರಿಂದ ಮತ್ತು ಸಂವಿಧಾನವನ್ನು ತಿದ್ದುಪಡಿ ಮಾಡಬೇಕಾಗಿರುವುದರಿಂದ ಅದರ ಬಗ್ಗೆ ಸಮಾಲೋಚನೆ ಮಾಡಿ ಸೂಕ್ತವಾದಂಥ ನಿರ್ಣಯವನ್ನು ತೆಗೆದುಕೊಳ್ಳಲಾಗುವುದು.